ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ
4ನೇ 'ಟಿ' ಬ್ಲಾಕ್, ಜಯನಗರ - 560 041
Rajiv Gandhi University of Health Sciences, Karnataka
4th 'T' Block, Jayanagar, Bangalore - 560 041

ಆರ್‌ಜಿಯು/ನಿರ್ವಹಣೆ/ಈಆಫೀಸ್/01/2023 ದಿ: 04-02-2023

## ಸುತ್ತೋಲೆ

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಮತ್ತು ಅದರ ಅಧೀನದ ಎಲ್ಲ ಕಾಲೇಜುಗಳ ಕಡತ ಮತ್ತು ಪತ್ರಗಳ ನಿರ್ವಹಣೆಯನ್ನು ಈ-ಆಫೀಸ್ ತಂತ್ರಾಂಶದ ಮೂಲಕ ನಿವಹಿಸುವಂತೆ ರಾಜ್ಯ ಸರ್ಕಾರ ಸೂಚಿಸಿರುವುದು. ಆಡಳಿತದಲ್ಲಿ ಪಾರದರ್ಶಕತೆ ಹಾಗು ಕಡತಗಳ ಶೀಘ್ರ ವಿಲೇವಾರಿಗೆ ಸಂಬಂಧಿಸಿದಂತೆ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಈ-ಆಫೀಸ್ ತಂತ್ರಾಂಶವನ್ನು ಈವರೆಗೂ ಅನುಷ್ಠಾನಗೊಳಿಸದಿರುವುದರ ಬಗ್ಗೆ ಸರ್ಕಾರವು ವಿಷಾಧಿಸಿರುತ್ತದೆ.

ಈ ಹಿನ್ನಲೆಯಲ್ಲಿ ವಿಶ್ವವಿದ್ಯಾಲಯದಿಂದ ಸಂಯೋಜನೆಗೊಂಡಿರುವ ಎಲ್ಲಾ ಕಾಲೇಜುಗಳು ಇನ್ನು ಮುಂದೆ ತಮ್ಮ ಕಡತ/ಪತ್ರಗಳನ್ನು Soft copy (pdf format) ಮೂಲಕ ಕಡ್ಡಾಯವಾಗಿ ಸಲ್ಲಿಸುವುದು. ತಪ್ಪಿದಲ್ಲಿ ಸಂಬಂಧಪಟ್ಟವರನ್ನೇ ಜವಾಬ್ದಾರನ್ನಾಗಿಸಲಾಗುವುದು. ಕರ್ನಾಟಕ ಸರ್ಕಾರದ ಅಡಿಯಲ್ಲಿರುವ ವೈದ್ಯಕೀಯ ಸಂಸ್ಥೆಗಳು ಈ-ಆಫೀಸ್ ತಂತ್ರಾಂಶದೊಂದಿಗೆ ಕಾರ್ಯನಿರ್ವಹಿಸುತ್ತಿದ್ದರೆ, ವಿಶ್ವವಿದ್ಯಾಲಯಕ್ಕೆ ಈ-ಆಫೀಸ್ ಮೂಲಕ ಪತ್ರ/ಕಡತಗಳನ್ನು ಸಲ್ಲಿಸಬೇಕು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದ ಈಮೇಲ್ ವಿಳಾಸ mahadevaiah.71@ka.gov.in ಗೆ soft copy (pdf format)ಯನ್ನು ಕಳುಹಿಸುವುದು, ಮುಂದುವರಿದು ಕಾಲಕಾಲಕ್ಕೆ ಇಮೇಲ್ ಐಡಿಯ ಬದಲಾವಣೆಯ ಬಗ್ಗೆ ಅರಿತುಕೊಳ್ಳುವುದು ಕಾಲೇಜುಗಳ ಜವಾಬ್ದಾರಿಯಾಗಿರುತ್ತದೆ.

**ಕುಲಸಚಿವರು**

ಗೆ,

1. ಪ್ರಾಂಶುಪಾಲರು,ವಿಶ್ವವಿದ್ಯಾಲಯದ ಸಂಯೋಜನೆಗೆ ಒಳಪಟ್ಟ ಎಲ್ಲಾ ಕಾಲೇಜುಗಳು,
2. ಕುಲಪತಿಗಳು /ಕುಲಸಚಿವರು/ ಕುಲಸಚಿವರು(ಮೌ)/ ಹಣಕಾಸು ಅಧಿಕಾರಿಗಳ ಆಪ್ತ ಕಾರ್ಯದರ್ಶಿಗಳು.
3. ಕಛೇರಿ ಪ್ರತಿ.